ಬೀದರ್ ಜಿಲ್ಲೆಗೆ ನರ್ಮ್ ಯೋಜನೆಯ ವಿಸ್ತರಣೆ:

780 (1441); ಡಾ॥ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್)

(ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ನರ್ಮ್ ಯೋಜನೆಯಡಿಯಲ್ಲಿ ಬಸ್ಸುಗಳನ್ನು ಖರೀದಿಸಲಾಗಿದೆ; ಇದಕ್ಕಾಗಿ ಕೇಂದ್ರ ಸರ್ಕಾರ ಎಷ್ಟು ಹಣವನ್ನು ಬಿಡುಗಡೆ ಮಾಡಿದೆ; ಬೀದರ್ ಜಿಲ್ಲೆಗೆ ಈ ಯೋಜನೆಯನ್ನು ವಿಸ್ತರಿಸಲಾಗಿದೆಯೇ; ಇಲ್ಲದಿದ್ದಲ್ಲಿ ಕಾರಣಗಳೇನು;

(ಆ) ಜಿಲ್ಲೆಯಲ್ಲಿ ಸಂಚರಿಸುತ್ತಿರುವ ಬಹುತೇಕ ಸಾರಿಗೆ ಬಸ್ಸುಗಳು ಹಳೆಯ ದಾಗಿದ್ದು ಹೊಸ ಬಸ್ಸುಗಳನ್ನು ಖರೀದಿಸಲು ಅನುಕೂಲವಾಗುವಂತೆ ನರ್ಮ್ ಯೋಜನೆಯನ್ನು ಬೀದರ್ ಜಿಲ್ಲೆಗೂ ವಿಸ್ತರಿಸುವ ಬಗ್ಗೆ ಸರ್ಕಾರ ಪರಿಶೀಲಿಸುವುದೇ?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

(ಅ) ಕಳೆದ 03 ವರ್ಷಗಳಲ್ಲಿ ನರ್ಮ ಯೋಜನೆ ಅಡಿಯಲ್ಲಿ ಯಾವುದೇ ಬಸ್ಸುಗಳನ್ನು ಖರೀದಿಸಿರುವುದಿಲ್ಲ.

2013–14ನೇ ಸಾಲಿನಲ್ಲಿ ಈ. ಕ. ರ. ಸಾ. ಸಂಸ್ಥೆಗೆ ಒಟ್ಟು 329 ಬಸ್ಸು ಗಳಿಗೆ ನರ್ಮ ಯೋಜನೆಯಡಿಯಲ್ಲಿ ಮಂಜೂರಾತಿ ದೊರಕಿದ್ದು, ಈ ಪೈಕಿ ಬೀದರ ನಗರಕ್ಕೆ 20 ವಾಹನಗಳನ್ನು ಹಂಚಿಕೆ ಮಾಡಲಾಗಿದೆ. ಮೇಲ್ಕಂಡ ವಾಹನಗಳ ಖರೀದಿಗಾಗಿ ಕೇಂದ್ರ ಸರ್ಕಾರದ ಮೊದಲನೇ ಕಂತಿನ ಅನುದಾನ ಬಿಡುಗಡೆಯಾಗಬೇಕಾಗಿದೆ.

(ಆ) ನರ್ಮ್ ಯೋಜನೆಯಲ್ಲಿ ನಗರ ಸಾರಿಗೆ ವಾಹನಗಳ ಖರೀದಿಗೆ ಮಾತ್ರ ಅವಕಾಶವಿದ್ದು, ಅದರಂತೆ ಸದರಿ ಯೋಜನೆಯಡಿ ಬೀದರ್ ನಗರಕ್ಕೆ 20 ನಗರ ಸಾರಿಗೆ ವಾಹನಗಳ ಮಂಜೂರಾತಿ ದೊರಕಿರುತ್ತದೆ. ಸದರಿ ವಾಹನಗಳನ್ನು ಮುಂಬರುವ ದಿನಗಳಲ್ಲಿ ಕಾರ್ಯಚರಣೆ ಪ್ರಾರಂಭಿಸಿ ನಗರದ ಪ್ರಯಾಣಿಕರಿಗೆ ವ್ಯವಸ್ಥಿತ ಮತ್ತು ಸಮರ್ಪಕವಾದ ನಗರ ಸಾರಿಗೆ ಸೇವೆ ಒದಗಿಸಲು ಯೋಜನೆ ರೂಪಿಸಲಾಗಿರುತ್ತದೆ.

ಬೀದರ್ ವಿಭಾಗದಲ್ಲಿ ಒಟ್ಟು 562 ವಾಹನಗಳಿದ್ದು, ಅದರಲ್ಲಿ 133 ವಾಹನಗಳು 7.50 ಲಕ್ಷಕ್ಕಿಂತ ಹೆಚ್ಚು ಕಿ.ಮೀ. ಕ್ರಮಿಸಿರುವ ವಾಹನ ಗಳಾಗಿರುತ್ತವೆ. ಹಳೆಯ ವಾಹನಗಳಲ್ಲಿ ಕಳೆದ ವರ್ಷ 65 ವಾಹನ ಗಳನ್ನು ಹಾಗೂ ಪ್ರಸಕ್ತ ಸಾಲಿನಲ್ಲಿ ಈ ವರೆಗೆ 4 ವಾಹನಗಳನ್ನು ನಿಷ್ಕ್ರಿಯೆಗೊಳಿಸಲಾಗಿದ್ದು, ಇನ್ನುಳಿದ ಹಳೆಯ ವಾಹನಗಳನ್ನು ಅವುಗಳ ಸ್ಥಿತಿಗತಿಯ ಆಧಾರದ ಮೇಲೆ ನಿಷ್ಕ್ರಿಯೆಗೊಳಿಸಲಾಗುವುದು. ಪ್ರಸಕ್ತ ಸಾಲಿನ ಕ್ರಿಯಾ ಯೋಜನೆಯಂತೆ ಇನ್ನು 129 ಹಳೆಯ ವಾಹನಗಳನ್ನು ನಿಷ್ಕ್ರೀಯಗೊಳಿಸಿ 120 ಹೊಸ ವಾಹನಗಳನ್ನು ಒದಗಿಸಲು ಯೋಜಿಸ ಲಾಗಿರುತ್ತದೆ.

ಹೊಸ ವೈದ್ಯಕೀಯ ಕಾಲೇಜುಗಳ ಸ್ಥಾಪನೆ

781 (1442); ಡಾ: ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್)

(ಅ) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಯಾವ ಯಾವ ಸ್ಥಳಗಳಲ್ಲಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲಾಗುವುದು. ಪ್ರತಿ ವೈದ್ಯಕೀಯ ಕಾಲೇಜಿನ ಸ್ಥಾಪನೆಗೆ ತಗಲುವ ವೆಚ್ಚವೆಷ್ಟು; ಇಲ್ಲಿಯವರೆಏಗೆ ಸಾಧಿಸಿರುವ ಪ್ರಗತಿ ಏನು; (ಪ್ರತಿ ಕಾಲೇಜಿನ ಬಗ್ಗೆ ಪ್ರತ್ಯೇಕ ವಿವರಗಳನ್ನು ಒದಗಿಸುವುದು)

(ಆ) ಪ್ರಸಕ್ತ ಸಾಲಿನಲ್ಲಿ ಎಷ್ಟು ಯೋಜನೆಗಳನ್ನು ಪ್ರಾರಂಭಿಸಲಾಗುವುದು; ಈ ಎಲ್ಲಾ ವೈದ್ಯಕೀಯ ಕಾಲೇಜುಗಳಿಗೆ ಭಾರತೀಯ ವೈದ್ಯಕೀಯ ಪರಿಷತ್ತು ಅನುಮತಿ ನೀಡಿದೆಯೇ; ಹಾಗಾದರೆ, ಇದುವರೆಏಗೂ ಅನುಮತಿ ನೀಡದೇ ಇರಲು ಕಾರಣಗಳೇನು?

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು)

(ಅ) ಪ್ರಸಕ್ತ 2014–15ನೇ ಸಾಲಿನಲ್ಲಿ ಕಾರವಾರ, ಕೊಪ್ಪಳ, ಕೊಡಗು, ಗದಗ, ಗುಲ್ಬರ್ಗಾ, ಮತ್ತು ಚಾಮರಾಜನಗರ ಇಲ್ಲಿ ಹೊಸ 06 ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲು ಸರ್ಕಾರವು ಮಂಜೂರಾತಿ ನೀಡಿದೆ.